# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 632 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ |
| ಉತ್ತರಿಸುವ ದಿನಾಂಕ | : | 23.12.2022 |
| ಉತ್ತರಿಸುವ ಸಚಿವರು | : | ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಕುದೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಿವಗಂಗೆ ರಸ್ತೆಯ ಕೆರೆ ಅಂಚಿನಲ್ಲಿ 46 ಅಲೆಮಾರಿ ಕುಟುಂಬಗಳು ಗುಡಿಸಲುಗಳನ್ನು ಕಟ್ಟಿಕೊಂಡು ಯಾವುದೇ ನಾಗರೀಕ ಸೌಲಭ್ಯಗಳಿಲ್ಲದೆ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು</td></tr>
<tr><td>ಆ)</td><td>ಈ ಅಲೆಮಾರಿಗಳು ವಾಸಿಸುತ್ತಿರುವ ಕೆರೆಯನ್ನು ಇತ್ತೀಚಿಗೆ ಕಂದಾಯ ಇಲಾಖೆಯ ಅಧಿಕಾರಿಗಳು ಸರ್ವೆ ಮಾಡಿದ್ದು, ಗುಡಿಸಲುಗಳನ್ನು ತೆರವು ಮಾಡುವಂತೆ ನೋಟಿಸ್ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಅಲೆಮಾರಿಗಳು ವಾಸಿಸುತ್ತಿರುವ ಗುಡಿಸಲುಗಳನ್ನು ತೆರವು ಮಾಡಲು ಯಾವುದೇ ನೋಟಿಸ್ ನೀಡಿರುವುದಿಲ್ಲವೆಂದು ಹಾಗೂ ಸರ್ವೆ ಇಲಾಖೆಯಿಂದ ಅಳತೆ ಕಾರ್ಯ ಮಾಡಿರುವುದಾಗಿ ಕಂದಾಯ ಇಲಾಖೆಯವರು ವರದಿ ಮಾಡಿರುತ್ತಾರೆ. ಆದಾಗ್ಯೂ ಇಲಾಖಾ ವತಿಯಿಂದ ಸಂತ್ರಸ್ತರ ಕುಟುಂಬಗಳನ್ನು ಭೇಟಿ ಮಾಡಿ ಸರ್ವೆ ಕಾರ್ಯ ಮಾಡಲಾಗಿದೆ. ಅದರಂತೆ ಒಟ್ಟಾರೆ 36 ಕುಟುಂಬಗಳು ಕೆರೆ ಅಂಗಳದಲ್ಲಿ ಗುಡಿಸಲು ಮತ್ತು ಕಚ್ಚಾ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ.<br><table><tr><td>ಪರಿಶಿಷ್ಟ ಜಾತಿಯವರು</td><td>26</td></tr><tr><td>ಪರಿಶಿಷ್ಟ ಪಂಗಡ</td><td>03</td></tr><tr><td>ಹಿದುಳಿದ ವರ್ಗ</td><td>07</td></tr></table></td></tr>
<tr><td>ಇ)</td><td>ಬಂದಿದ್ದಲ್ಲಿ, ಯಾವುದೇ ಸರ್ಕಾರದ ಸೌಲಭ್ಯಗಳನ್ನು ಪಡೆಯದ ಇವರಿಗೆ ಶಾಶ್ವತವಾದ ಸೂರು ಕಲ್ಪಿಸಿ ಇವರಿಗೆ ಸರ್ಕಾರದಿಂದ ಸವಲತ್ತುಗಳನ್ನು ಒದಗಿಸಲು ಸರ್ಕಾರ ಯಾವುದಾದರೂ ಯೋಜನೆಯನ್ನು ರೂಪಿಸಲಾಗುವುದೇ? (ವಿವರ ನೀಡುವುದು)</td><td>ಕಂದಾಯ ಇಲಾಖಾ ವರದಿಯಂತೆ ತಹಶೀಲ್ದಾರ್ ಮಾಗಡಿ ತಾಲ್ಲೂಕು ಇವರ ಕಛೇರಿಯ ಪತ್ರ ಸಂ:ಎಲ್‌ಎನ್‌ಡಿ/ಸಿಆರ್-891/2022-23, ದಿನಾಂಕ:26.09.2022 ರಲ್ಲಿ ಉಪವಿಭಾಗಾಧಿಕಾರಿ, ರಾಮನಗರ ಉಪವಿಭಾಗ ರವರಿಗೆ ಅಲೆಮಾರಿಗಳಿಗೆ ಶಾಶ್ವತವಾಗಿ ಸೂರು ಕಲ್ಪಿಸುವ ಸಂಬಂಧ ಆಶ್ರಯ ಯೋಜನೆಯಡಿ ನಿವೇಶನ ಮಂಜೂರು ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಇದಲ್ಲದೇ ನಿರಾಶ್ರಿತ ಕುಟುಂಬಗಳಿಗೆ ತಾತ್ಕಾಲಿಕವಾಗಿ ತಲಾ ಕುಟುಂಬಕ್ಕೆ ರೂ.10.000/- ರತೆ ಪರಿಹಾರ ವಿತರಿಸಲಾಗಿದೆ.</td></tr>
</table>

ಸಕಇ 595 ಎಸ್‌ಡಿಸಿ 2022

(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು